**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/01/ಇಎಸ್ ಟಿ(3)/2025

ಆಯುಕ್ತರ ಕಚೇರಿ
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು 01,
ದಿನಾಂಕ:18.03.2025

**ಸುತ್ತೋಲೆ**

**ವಿಷಯ :** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಮಾನವ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಒದಗಿಸುತ್ತಿರುವ ಕುರಿತು.

**ಉಲ್ಲೇಖ:**
1. ಇಲಾಖೆಯ ಟಂಡರ್ ಕಾರ್ಯಾದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3)/2017, ದಿನಾಂಕ: 21.07.2018.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಅಧಿಸೂಚನೆ ಸಂಖ್ಯೆ; DTE-ADMIOEST(3)/15/2020/464, ದಿನಾಂಕ: 02-07-2024.

*****

ಮೇಲ್ಕಂಡ ಉಲ್ಲೇಖ ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯ ಟೆಂಡರ್ ಕಾರ್ಯಾದೇಶದನ್ವಯ ಇಲಾಖೆಯ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿನ ಗ್ರೂಪ್-ಡಿ (ಕಛೇರಿ / ಕಾರ್ಯಾಗಾರ) ಹುದ್ದೆಗಳ ಪೈಕಿ ಮೇ|| ಮಾತಾ ಟೆಕ್ನಾಲಜೀಸ್, ಧಾರವಾಡ ಹಾಗೂ ಮೆ|| ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಒದಗಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸರ್ಕಾರದ, ಸಚಿವಾಲಯ ಹಾಗೂ ಆಯುಕ್ತಾಲಯಕ್ಕೆ ಸದರಿ ಗ್ರೂಪ್ 'ಡಿ' ಸಿಬ್ಬಂದಿಗಳ ಆದೇಶವನ್ನು ನೀಡುವ ಸಂಬಂಧ ಏಜೆನ್ಸಿಯವರು ಹೆಚ್ಚುವರಿ ಮೊತ್ತವನ್ನು ಕೋರುತ್ತಿರುವುದಾಗಿ, ನೀಡದ ಪಕ್ಷದಲ್ಲಿ ಆದೇಶವನ್ನು ವಿಳಂಬ ಅಥವಾ ನೀಡದೆ ಇರುವ ಬಗ್ಗೆ ಅನೇಕ ದೂರುಗಳು ಮೌಖಿಕವಾಗಿ ಬರುತ್ತಿವೆ. ಸದರಿ ವಿಷಯವನ್ನು ಸರ್ಕಾರವು ತೀವ್ರತರವಾಗಿ ಪರಿಗಣಿಸಲಾಗಿದ್ದು, ಈ ಮೂಲಕ ತಮಗೆ ತಿಳಿಸುವುದೇನೆಂದರೆ, ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳು ಹೆಚ್ಚುವರಿ ಹಣ ನೀಡುವುದರ ಕುರಿತು ಟೆಂಡರ್ ಕಾರ್ಯಾದೇಶದಲ್ಲಿ ತಿಳಿಸಿರುವಂತೆ ಅವಕಾಶವಿರುವುದಿಲ್ಲ. ಸದರಿ ವಿಷಯದ ಕುರಿತು ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳಿಗೆ ಸಂಕ್ಷಿಪ್ತವಾಗಿ ಗಮನಕ್ಕೆ ತರುವಂತೆ ಸೂಚಿಸಲಾಗಿದೆ.

Manjula

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ,

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಪ್ರಾಂಶುಪಾಲರ ಮಾಹಿತಿಗಾಗಿ.

CamScanner